ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

17

ಇಲಾಖೆ / ವಿಷಯ : DEPARTMENT / SUBJECT: ಕೋವಿಡ್-19 - ಸಂಸತ್ ಅಧಿವೇಶನ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 21/9/2020

# 6 ಶಾಸಕ, 3 ಸಂಸದರು, ಓರ್ವ ಮಾಜಿ ರಾಷ್ಟಪತಿ ಕೊರೋನಾಗೆ ಬಲಿ

ನವದೆಹಲಿ: ಇಡೀ ಮನುಕುಲವನ್ನೇ ನಡುಗಿಸಿರುವ ಕೊರೋನಾ ವಿವಿಐಪಿಗಳನ್ನೂ ಬಿಟ್ಟಿಲ್ಲ. ದೇಶದಲ್ಲಿ ಈವರೆಗೆ 6 ಶಾಸಕರು, 3 ಸಂಸದರು ಹಾಗೂ ಓರ್ವ ಮಾಜಿ ರಾಷ್ಟ್ರಪತಿ ಕೊರೋನಾಗೆ ಬಲಿಯಾಗಿದ್ದಾರೆ. ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ, ಕರ್ನಾಟಕದ ರಾಜ್ಯಸಭಾ ಸದಸ್ಯ ಅಶೋಕ್ ಗಸ್ತಿ, ತಿರುಪತಿ ಸಂಸದ ಬಲ್ಲಿ ದುರ್ಗಾ ಪ್ರಸಾದ್ ರಾವ್, ತಮಿಳುನಾಡಿನ ಸಂಸದ ಎಚ್.ವಸಂತ ಕುಮಾರ್ ಅವರು ಕೋವಿಡ್‌ನಿಂದ ಇಹಲೋಕ ತ್ಯಜಿಸಿದ್ದಾರೆ. ಹಾಗೆಯೇ ಮಧ್ಯಪ್ರದೇಶ, ತಮಿಳುನಾಡು, ಪುಣೆಯಲ್ಲಿ ತಲಾ ಒಬ್ಬರು ಶಾಸಕರು, ಪಶ್ಚಿಮ ಬಂಗಾಳದಲ್ಲಿ ಇಬ್ಬರು ಶಾಸಕರು ಕೊರೋನಾದಿಂದ ಮೃತಪಟ್ಟಿದ್ದಾರೆ.